ಮಾಯೆಯಿಂದಲೇ ಮೋಹಿತನಾಗಿ, 'ನಾನು ಶರೀರ, ಪ್ರಾಣ, ಮನಸ್ಸು' ಎಂದು ಭ್ರಮೆಯನ್ನು ಹೊಂದಿರುವನು. ಚಿತ್ತವು ಕಾರ್ಯಕಾರಣರೂಪವಾದ ದ್ವೈತವಸ್ತುವನ್ನು ಗ್ರಹಿಸಿದಾಗ ಸ್ವಾತ್ಮಾನಂದವು ಮುಚ್ಚಲ್ಪಟ್ಟು ದುಃಖವು ಪ್ರಕಟವಾಗುತ್ತದೆ. ಎಲ್ಲಿಯವರೆಗೆ ಕಾರ್ಯಕಾರಣಭಾವವಿರುತ್ತದೆಯೋ ಅಲ್ಲಿಯ ವರೆಗೆ ಸಂಸಾರವು ದೀರ್ಘವಾಗಿರುತ್ತದೆ. ಸಮ್ಯಗ್ದರ್ಶನದಿಂದ ಕಾರ್ಯಕಾರಣ ಭಾವವು ಕ್ಷೀಣವಾದರೆ ಸಂಸಾರವು ನಿಂತು ಹೋಗುತ್ತದೆ. ಚಿತ್ತವು ಅಸದ್ವಸ್ತುವನ್ನು ಏಕೆ ಗ್ರಹಿಸುತ್ತದೆ? ಅಸದ್ವಸ್ತುಗಳಲ್ಲಿ ಆಸಕ್ತಿಯಿರುವುದೇ ಇದಕ್ಕೆ ಕಾರಣ. ಅವಿದ್ಯಾವ್ಯಾಮೋಹರೂಪವಾದ ಆಸಕ್ತಿಯಿಂದ ಚಿತ್ತವು ವಸ್ತುಗಳ ಕಡೆ ಪ್ರವರ್ತಿಸುತ್ತದೆ. ವಸ್ತುವಿನ ಅಸದ್ಭಾವವನ್ನು ಅರಿತುಕೊಂಡರೆ ವೈರಾಗ್ಯವು ತಾನಾಗಿಯೇ ಉಂಟಾಗುವುದು. ಜ್ಞಾನಮಾರ್ಗವು ಸಮಸ್ತ ಸಾಧಕರಿಗೂ ಸುಲಭವಾಗಿರುವುದಿಲ್ಲ. ಹರಿತವಾದ ಕತ್ತಿಯ ಅಲಗು ದಾಟಲು ಕಷ್ಟವಾಗಿರುವಂತೆ ಈ ಪಥವು ದುರ್ಗಮವೆಂದು ಕಠೋಪನಿಷತ್ತು ಹೇಳುತ್ತದೆ.

ಜ್ಞಾನಾಧಿಕಾರಿಗಳಲ್ಲಿ ಹೀನ, ಮಧ್ಯಮ, ಉತ್ಕೃಷ್ಟ ಎಂದು ಮೂರು ಪ್ರಭೇದಗಳಿವೆ. ಮಂದ–ಮಧ್ಯಮ ದೃಷ್ಟಿಯುಳ್ಳ ಅಧಿಕಾರಿಗಳು ಏಕತ್ವವನ್ನು ಹೊಂದಲೆಂದು ಶ್ರುತಿಗಳು ಅನುಕಂಪೆಯಿಂದ ಕರ್ಮೋಪಾಸನೆಗಳನ್ನು ವಿಧಿಸಿವೆ. ಅದ್ವಯ ಜ್ಞಾನವುಳ್ಳ ಉತ್ಕೃಷ್ಟ ಅಧಿಕಾರಿಗಳಿಗೆ ಕರ್ಮೋಪಾಸನೆಗಳ ಆವಶ್ಯಕತೆಯಿಲ್ಲ. ಶ್ರೀಶಂಕರಾಚಾರ್ಯರು ತಮ್ಮ ಪೀಠಿಕೆಯಲ್ಲಿ ಈ ಉಪನಿಷತ್ತು ಪರಾಪರಬ್ರಹ್ಮರೂಪವಾದ ಓಂಕಾರದ ಸ್ಪಷ್ಟ ವಾದ ವ್ಯಾಖ್ಯಾನವೆಂದು ಹೇಳಿದ್ದಾರೆ. ಓಂಕಾರವು ಬ್ರಹ್ಮಕ್ಕೆ ಅತ್ಯಂತ ನಿಕಟವರ್ತಿಯಾದುದರಿಂದ ಬ್ರಹ್ಮನ ತಿಳಿವಳಿಕೆಗೆ ಸಾಧನವಾಗಿದೆ. ಆದುದರಿಂದ ಓಂಕಾರೋಪಾಸನೆ ಎಂಬುದು ಪರಮಾತ್ಮನನ್ನು ಪ್ರಸನ್ನನನ್ನಾಗಿ ಮಾಡಿಕೊಳ್ಳಲು ಒಂದು ಪ್ರಧಾನವಾದ ಉಪಾಯವಾಗಿದೆ.

ಉಪಾಸನೆ ಮಾಡಲು ಯಾವುದೋ ಒಂದು ಲೌಕಿಕ ಅವಲಂಬನೆಯನ್ನು ಆಶ್ರಯಿಸಿದರೆ ಫಲಕಾರಿಯಾಗುವುದಿಲ್ಲ. ಅಂಥ ಆಲಂಬನೆಯು ಶಾಸ್ತ್ರದಲ್ಲಿ ಉಪದಿಷ್ಟವಾಗಿರಬೇಕು. ಆಚಾರ್ಯರು ಛಾಂದೋಗ್ಯೋಪನಿಷತ್ತಿನ ತಮ್ಮ ಅವತರಣಿಕೆ ಯಲ್ಲಿ ಅದ್ವೈತಜ್ಞಾನಕ್ಕೂ, ಉಪಾಸನೆಗೂ ಇರುವ ಭೇದ ವನ್ನು ಹೀಗೆ ತಿಳಿಸಿದ್ದಾರೆ: "ಅವಿಕ್ರಿಯನಾದ ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಕರ್ತ್ರಾದಿಕಾರಕಗಳು, ಕ್ರಿಯೆ, ಫಲ ಎಂಬ ಭೇದಜ್ಞಾನವನ್ನು ತೊಲಗಿಸುವುದೇ ಅದ್ವೈತ ವಿಜ್ಞಾನ. ಶಾಸ್ತ್ರವು ಉಪದೇಶಿಸಿರುವ ಯಾವುದಾದರೊಂದು ಆಲಂಬನವನ್ನು ತೆಗೆದುಕೊಂಡು ಅದರಲ್ಲಿ ಏಕರೂಪವಾದ ಚಿತ್ತವೃತ್ತಿಯನ್ನು – ಅದಕ್ಕಿಂತ ಭಿನ್ನವಾದ ಪ್ರತ್ಯಯವು ಬಾರ ದಂತೆ – ಪ್ರಯೋಗಿಸುವುದೇ ಉಪಾಸನೆ."

ಗೌಡಪಾದರು ಓಂಕಾರೋಪಾಸನೆಯಿಂದಾಗುವ ಪ್ರಯೋಜನವನ್ನು ಹೇಳಿದ್ದಾರೆ. **'ಅ'**ಕಾರವು ವಿಶ್ವನಲ್ಲಿಗೆ ಒಯ್ಯುತ್ತದೆ; **'ಉ'**ಕಾರವು ತೈಜಸನಲ್ಲಿಗೆ ಒಯ್ಯುತ್ತದೆ. **'ಮ'** ಕಾರವು ಪ್ರಾಜ್ಞನಲ್ಲಿಗೆ ಒಯ್ಯುತ್ತದೆ. ಸ್ಥೂಲ ಜಗತ್ತು, ಜಾಗೃದವಸ್ಥೆ ಮತ್ತು ವಿಶ್ವ ಇವುಗಳನ್ನು **'ಅ'**ಕಾರವು ಸೂಚಿಸುತ್ತದೆ. ಸೂಕ್ಷ್ಮ ಜಗತ್ತು, ಸ್ವಪ್ನ ಮತ್ತು ತೈಜಸ – ಇವುಗಳನ್ನು **'ಉ'**ಕಾರವು ಸೂಚಿಸುತ್ತದೆ. ಈಶ್ವರ ಅಥವಾ ಜಗತ್ಕಾರಣ, ಸುಷುಪ್ತಿ ಮತ್ತು ಪ್ರಾಜ್ಞ – ಇವುಗಳನ್ನು **'ಮ'**ಕಾರವು ಸೂಚಿಸುತ್ತದೆ. ಸ್ಥೂಲದಿಂದ ಸೂಕ್ಷ್ಮಕ್ಕೆ ಸಾಧಕನನ್ನು ಕರೆದುಕೊಂಡು ಹೋಗಿ, ಕೊನೆಗೆ ದ್ವೈತಜ್ಞಾನವನ್ನು ನಾಶಮಾಡುವುದೇ ಈ ಪ್ರಣವೋಪಾಸನೆಯ ಉದ್ದೇಶವಾಗಿದೆ.

ತುರೀಯಾವಸ್ಥೆಯು ನಿಜವಾಗಿ ಯಾವ ಒಂದು ಪ್ರತ್ಯೇಕ ಅವಸ್ಥೆಯೂ ಅಲ್ಲ. ಎಲ್ಲ ಅವಸ್ಥೆಗಳನ್ನು ಒಳಗೊಂಡು, ಎಲ್ಲ ಅವಸ್ಥೆಗಳಲ್ಲಿಯೂ ಒಬ್ಬನೇ ಆತ್ಮನಿರುವನೆಂಬ ತಿಳಿವಳಿಕೆಗೆ ಇದು ಆಧಾರವಾಗಿದೆ. ಇದು ಓಂಕಾರದ ಅಮಾತ್ರೆ. ಅಮಾತ್ರೆಗೆ ಗತಿ–ಗಂತೃ–ಗಮ್ಯ ಸ್ಥಾನಗಳೆಂಬ ಭೇದಗಳಿರುವುದಿಲ್ಲ. ಈ ರೀತಿ ಓಂಕಾರವು ಪರಾಪರ ಬ್ರಹ್ಮಗಳ ಮುಖ್ಯ ಪ್ರತೀಕವಾಗಿ ಸಾಧಕರ ಉಪಾಸನೆಗೆ ವಿಶೇಷ ಅವಲಂಬನವಾಗಿರುತ್ತದೆ.

## ಮುಕ್ತಿ ಮತ್ತು ಮುಕ್ತ

ಮೋಕ್ಷವೆಂದರೆ ತನ್ನ ಆತ್ಮಸ್ವರೂಪವನ್ನು ಅರಿತುಕೊಳ್ಳುವುದು. ತನಗೆ ಸ್ವಾಭಾವಿಕವಾಗಿರದ ಯಾವ ಹೊಸ ಅವಸ್ಥೆಯೂ ಅದರಿಂದ ಉಂಟಾಗುವುದಿಲ್ಲ. ಪರಮಪುರುಷಾರ್ಥರೂಪವಾದ ಮೋಕ್ಷವು ಮರಣಾನಂತರ ಸಂಭವಿಸುವ ಸ್ಥಿತಿಯೂ ಅಲ್ಲ. ಮಹಾಜ್ಞಾನಿಗೆ ಸರ್ವಜ್ಞತ್ವವು ಇಲ್ಲಿಯೇ ಉಂಟಾಗುವುದು. ಪರಮಾರ್ಥದರ್ಶಿಯು ತಾನು ಇಂಥವನೆಂದು ತೋರಿಸಿಕೊಳ್ಳದೆ ಜಡನಂತೆ ಲೋಕವ್ಯವಹಾರವನ್ನು ಮಾಡುತ್ತಾನೆ. ಅವನಿಗೆ ಪರಿಗ್ರಹವಾಗಲಿ ಅಪರಿಗ್ರಹವಾಗಲಿ ಇರುವುದಿಲ್ಲ; ರಾಗಕ್ರೋಧಭಯಗಳಿಲ್ಲದೆ ಸುಖದುಃಖಗಳಲ್ಲಿ, ಮಾನಾಪಮಾನ ಗಳಲ್ಲಿ ಸಮಾನವಾಗಿರುವನು. ಸಮಸ್ತ ಸರ್ವಜ್ಞತೆಯನ್ನೂ, ಅದ್ವಯವಾದ ಬ್ರಾಹ್ಮಣ್ಯಪದವನ್ನೂ ಪಡೆದಮೇಲೆ ಅವನಿಗೆ ಇನ್ನೇನು ಬೇಕು? ಗೀತೆಯು ಹೇಳುವಂತೆ ಕರ್ಮಾನುಷ್ಠಾನದಿಂದ ಅವನಿಗೆ ಯಾವ ಪ್ರಯೋಜನವೂ ಇಲ್ಲ (**ನೈವ ತಸ್ಯ ಕೃತೇನಾರ್ಥಃ**). ಆತ್ಮಸ್ವರೂಪದಲ್ಲಿ ನಿಂತಿರುವುದರಿಂದ ಇವನಿಗೆ ವಿನಯವು ಸ್ವಾಭಾವಿಕವಾಗಿರುತ್ತದೆ. ಇವನ ಶ್ರಮವು ಯಾವ ಕೃತಕ ಸಾಧನಗಳಿಂದಲೂ ಉತ್ಪನ್ನವಾಗಿಲ್ಲ; ಏಕೆಂದರೆ ಬ್ರಹ್ಮವು ಸ್ವಭಾವತಃ ಉಪಶಾಂತರೂಪವಾದುದು. ಪರಮಾರ್ಥ ದರ್ಶಿಯು ತತ್ತ್ವೀಭೂತನಾಗಿದ್ದಾನೆ; ಹೀಗಾಗಿ ತತ್ತ್ವದಲ್ಲಿಯೇ ಆರಾಮವುಳ್ಳವನಾಗಿ, ತತ್ತ್ವದಿಂದ ಜಾರುವುದಿಲ್ಲ. ಇವನು ಹೊಂದಿದ ಪದವು ದುರ್ದರ್ಶವೂ, ಅತಿ ಗಂಭೀರವೂ ಅಜವೂ ಸಾಮ್ಯವೂ ವಿಶಾರದವೂ ಆಗಿದೆ. ಈ ಸ್ಥಿತಿಯಲ್ಲಿರುವ ಜೀವನ್ಮುಕ್ತನು ಜೀವ–ಪರಮಾತ್ಮರ ಅನನ್ಯತ್ವವನ್ನು ಅರಿತುಕೊಂಡು ನಾನಾತ್ವವನ್ನು ನೋಡುವುದಿಲ್ಲ. ಇದೇ ಅಕ್ಷಯವಾದ ಶಾಂತಿ. (***ಆಧಾರ: ಪೀಠಿಕೆ, ಮಾಂಡೂಕ್ಯೋಪನಿಷತ್ತು ಮತ್ತು ಗೌಡಪಾದ ಕಾರಿಕಾ*, ಸ್ವಾಮಿ ಆದಿದೇವಾನಂದ; ಪ್ರಕಾಶಕರು: ಶ್ರೀರಾಮಕೃಷ್ಣ ಆಶ್ರಮ, ಮೈಸೂರು**)



# ಸ್ವಾಮಿ ವಿವೇಕಾನಂದರು ನಿರೂಪಿಸಿದ

# ನೀತಿಕಥೆಗಳು



ಡಾ. ಕೆ. ಅನಂತರಾಮು

## ಮಾಯೆಯ ಅಪ್ಪುಗೆಯಲ್ಲಿ ನಾರದರು

ದಿವ್ಯಪ್ರಭೆಯ ಮೇಘಮಾಲೆಯಂತೆ ನಾವೆಲ್ಲರೂ ಈ ಜಗತ್ತಿಗೆ ಬರುತ್ತೇವೆಂದು ಕವಿಗಳು ಕೊಂಡಾಡುತ್ತಾರೆ. ಹಾಗೆ ಬಂದರೆ ತಾನೆ ಏನು, ಸಂಸಾರವೆಂಬ ರಣರಂಗದ ಹೋರಾಟ ಮಾತ್ರ ತಪ್ಪುವುದಿಲ್ಲ. ಮೃತ್ಯು ಮುಟ್ಟುವವರೆಗೂ ಆ ಹೋರಾಟ ಸಾಗುತ್ತಲೇ ಇರುತ್ತದೆ. ಆ ಹೋರಾಟದಲ್ಲಿ ಗೆದ್ದೆವೋ ಅಥವಾ ಸೋತೆವೋ ಏನೊಂದೂ ತಿಳಿಯುವುದಿಲ್ಲ. ಬಾಲ್ಯದಲ್ಲಿ ಈ ಜಗತ್ತೆಲ್ಲಾ ಒಂದು ಸ್ವರ್ಣಸ್ವಪ್ನದಂತೆ ಭಾಸವಾಗುತ್ತದೆ. ಆದರೆ ಯೌವನಕ್ಕೆ ಕಾಲಿಟ್ಟ ಮೇಲೆ ಬಹಿರ್ಮುಖತೆಗೆ ತುತ್ತಾಗಿ, ಇಂದ್ರಿಯ ಸುಖಕ್ಕಾಗಿ ಹಾತೊರೆಯಲು ತೊಡಗುತ್ತೇವೆ. ಆಗ ಪೆಟ್ಟುಬಿದ್ದರೂ ಪಾಠ ಕಲಿಯದೆ, ಪತಂಗವು ದೀಪಕ್ಕೆ ಧಾವಿಸುವಂತೆ ಇಂದ್ರಿಯಸುಖವನ್ನೇ ಅರಸಿ ಮತ್ತೆ ಮತ್ತೆ ಅದರತ್ತ ಧಾವಿಸುತ್ತೇವೆ. ಶಕ್ತಿ ಕುಂದುವವರೆಗೂ ಹೀಗೆಯೇ ಮೋಸಹೋಗಿ ಪರದಾಡಿ ಸತ್ತುಹೋಗುತ್ತೇವೆ. ವಿಶ್ವವೆಲ್ಲವೂ ಅಸದಳವಾದ ಕಾರ್ಯಕಾರಣಗಳ ಕೋಟೆಯಿಂದ ಸುತ್ತುವರೆದಿದೆ. ನಾವು ಸ್ವತಂತ್ರರಾಗಿದ್ದೇವೆ ಎಂದು ಭಾವಿಸುತ್ತಿರುತ್ತೇವೆ. ಆದರೂ ಅದೇ ಕ್ಷಣದಲ್ಲಿ ನಾವು ಪ್ರಕೃತಿಗೆ ಬದ್ಧರಾದ ಸೇವಕರು ಎಂಬುದು ಕೂಡ ಮನವರಿಕೆಯಾಗಿಬಿಡುತ್ತದೆ. ಅಷ್ಟಾದರೂ ಮೋಹ ತಪ್ಪುವುದಿಲ್ಲ. ತನ್ನ ಪ್ರಾಣವನ್ನೆಲ್ಲಾ ಒತ್ತೆಯಿಟ್ಟು ತಾಯಿಯೊಬ್ಬಳು ಬೆಳೆಸಿದ ಮಗು, ತರುವಾಯ ಕ್ರೂರಿಯಾಗಿ ತಾಯಿಯ ಪ್ರಾಣವನ್ನೇ ಹಿಂಡಬಹುದು. ಆಗಲೂ ಅದನ್ನೆಲ್ಲ ಹೇಗೋ ಅವಳು ವ್ಯಾಮೋಹದಿಂದ ಸಹಿಸಿಕೊಳ್ಳುತ್ತಾಳೆ. ಈ ಹೋರಾಟ, ಈ ಸುಖಾಪೇಕ್ಷೆ, ಈ ಸೇವಕತನ, ಈ ವ್ಯಾಮೋಹ ಮುಂತಾದ ಎಲ್ಲವೂ ಮಾಯೆಯ ಬೇರೆ ಬೇರೆ ಅವತಾರಗಳೇ ಆಗಿವೆ.



ಒಮ್ಮೆ ನಾರದರು ಶ್ರೀ ಕೃಷ್ಣಪರಮಾತ್ಮನನ್ನು ಕುರಿತು, "ಸ್ವಾಮಿ ನಿನ್ನನ್ನು ಮಾಯಾವಿ, ಕಪಟನಾಟಕಸೂತ್ರಧಾರಿ ಎಂದೆಲ್ಲ ಕೊಂಡಾಡುತ್ತೇವಲ್ಲ, ನಿನ್ನ ಮಾಯೆಯ ಸ್ವರೂಪವನ್ನೊಮ್ಮೆ ನನಗೆ ತೋರಿಸು" ಎಂದು ಬೇಡಿಕೊಂಡರು. ಅದಕ್ಕೆ ಸ್ವಾಮಿಯು, "ನೀನು ನನ್ನ ಪರಮಭಕ್ತನಲ್ಲವೇ, ಮಾಯೆಯನ್ನು ದಾಟಿದವನಲ್ಲವೇ, ನಿನಗೇಕೆ ಆ ಮಾಯೆಯ ಸಹವಾಸ?" ಎಂದನು. ಆದರೂ ನಾರದರು ಸುಮ್ಮನಿರದೆ, "ತುಂಬಾ ಕುತೂಹಲವುಂಟಾಗಿದೆ ಸ್ವಾಮಿ, ಅದನ್ನು ನೀನು ತಣಿಸಲೇಬೇಕು" ಎಂದು ಸ್ವಾಮಿಗೆ ಗಂಟುಬಿದ್ದರು. ಆಗ ಸ್ವಾಮಿಯು, "ಹಾಗೆಯೇ ಆಗಲಪ್ಪಾ, ಭಕ್ತರ ಕೋರಿಕೆಗಳನ್ನು ಈಡೇರಿಸುವುದು ನನ್ನ ಕರ್ತವ್ಯವಲ್ಲವೇ, ನಡೆ ನಡೆ, ಎಲ್ಲಿಯಾದರೂ ಒಂದು ನಿರ್ಜನ ಪ್ರದೇಶಕ್ಕೆ ಹೋಗೋಣ" ಎಂದು ನಾರದರನ್ನು ಜೊತೆಮಾಡಿಕೊಂಡು ಹೊರಟನು.

ಅದೊಂದು ಬಟ್ಟಬೇಸಿಗೆಯ ಕಾಲ. ಅದೆಷ್ಟೋ ಮೈಲುಗಳು ನಡೆದುಹೋದ ಮೇಲೆ ಯಾವುದೋ ಒಂದು ಬೆಂಗಾಡು ಪ್ರದೇಶವನ್ನು ಅವರು ಮುಟ್ಟಿದರು. ಶ್ರೀಕೃಷ್ಣನು ಬಾಯಾರಿ ಬಳಲಿ ಬೆಂಡಾಗಿ, ಒಂದು ಮರದ ಬುಡದಲ್ಲಿ ಕುಸಿದು ಕುಳಿತುಬಿಟ್ಟನು. "ಅಪ್ಪಾ ನಾರದ, ಪ್ರಾಣ ಹೋಗುತ್ತಿದೆಯಪ್ಪಾ, ಎಲ್ಲಾದರೂ ಸ್ವಲ್ಪ ನೀರು ಹುಡುಕಿ ತರುತ್ತೀಯಾ, ಅದನ್ನು ಕುಡಿದ ಮೇಲೆ ನಿನಗೆ ನನ್ನ ಮಾಯೆಯನ್ನು ತೋರಿಸುತ್ತೇನೆ" ಎಂದನು. ಒಡನೆಯೇ ನಾರದರು, "ಹಾಗೆಯೇ ಆಗಲಿ, ಸ್ವಾಮಿ" ಎಂದು ಹೇಳಿ ಆತುರಾತುರವಾಗಿ ಹೆಜ್ಜೆಗಳನ್ನಿಡುತ್ತಾ ಯಾವುದೋ ದಿಕ್ಕು ಹಿಡಿದು ಸಾಗಿದರು. ಅಷ್ಟು ದೂರ ಹೋದ ಬಳಿಕ ಅಲ್ಲೊಂದು ನದಿಯ ತೀರದಲ್ಲಿ ನಯನಮನೋಹರವಾದ ಗ್ರಾಮ ಕಣ್ಣಿಗೆ ಬಿತ್ತು. ನಾರದರು ಸಂತೋಷದಿಂದ ಯಾವುದೋ ಒಂದು ಮನೆಯ ಮುಂದೆ ನಿಂತು, "ಒಳಗೆ ಯಾರಿದ್ದೀರಿ, ಬಹಳ ಬಾಯಾರಿದ್ದೇವೆ, ಕುಡಿಯಲು ನೀರು ಕೊಡುತ್ತೀರಾ?" ಎಂದು ಬಾಗಿಲು ತಟ್ಟಿದರು. ಆ ಮನೆಯಲ್ಲಿ ತಂದೆ ಮಗಳು ಇಬ್ಬರೇ ಇದ್ದರು. ಮಗಳು ಎದ್ದುಬಂದು ಬಾಗಿಲು ತೆರೆದಳು. ಅವಳಾದರೋ ಅತಿಶಯವಾದ ರೂಪುಲಾವಣ್ಯಗಳಿಂದ ಕಂಗೊಳಿಸುತ್ತಿದ್ದಳು. ನಾರದರೇನು ಕಡಿಮೆ ಇರಲಿಲ್ಲ, ನವಯೌವನದಿಂದ ಕೂಡಿ ಕಾಮದೇವನಂತೆ ಕಂಗೊಳಿಸುತ್ತಿದ್ದರು. ಮೊದಲ ನೋಟದಲ್ಲಿಯೇ ಅವರು ಒಬ್ಬರನ್ನೊಬ್ಬರನ್ನು ಕಂಡು ಮೋಹಪರವಶರಾಗಿಬಿಟ್ಟರು. ನಾರದರಿಗೆ ತಾವು ಯಾರು, ಆ ಗ್ರಾಮಕ್ಕೆ ಬಂದಿರುವ ಉದ್ದೇಶವಾದರೂ ಏನು ಎಂಬುದೆಲ್ಲವೂ ಮರತೇಹೋಯಿತು. ಸ್ವಾಮಿಯು ನೀರಿಗಾಗಿ ಪರಿತಪಿಸುತ್ತಿದ್ದಾನೆ, ಅವನ ಪ್ರಾಣಪಕ್ಷಿ ಹಾರಿಹೋಗುವ ಸ್ಥಿತಿಯಲ್ಲಿದೆ ಎಂಬುದು ಕೂಡ ಮರೆತೇಹೋಯಿತು. ರೂಪಸಿಯಾದ ಆ ಗ್ರಾಮಕನ್ಯೆಗೆ ಮರುಳಾಗಿ ಸ್ವಲ್ಪವೂ ಸಂಕೋಚವಿಲ್ಲದೆ, "ಸುಂದರೀ, ನನಗೆ ನಿನ್ನ ಮೇಲೆ ಮನಸ್ಸಾಗಿದೆ. ನನ್ನನ್ನು ಮದುವೆಯಾಗುತ್ತೀಯಾ?" ಎಂದು ಕೇಳಿದರು. ಅವಿವಾಹಿತೆಯಾಗಿದ್ದ ಆ ಯುವತಿಯಾದರೋ, "ನಮ್ಮ ತಂದೆಯವರನ್ನು ನೀವು ಕೇಳಬೇಕು" ಎಂದು ನಾಚಿ ನೀರಾಗುತ್ತ ನಯವಾಗಿ ಉತ್ತರಿಸಿದಳು. ಆಗ ನಾರದರು ಮನೆಯ ಒಳಹೊಕ್ಕು ಕುಳಿತರು.